ಕರ್ನಾಟಕ ಸರ್ಕಾರ

ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಪದವಿ ಪೂರ್ವ ಶಿಕ್ಷಣ ಭವನ, ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 260 012.

ಸಂಖ್ಯೆ: ಪಪೂಶಿ/ಇ–ಆಡಳಿತ/ ಲೆಕ್ಕಪತ್ರ /ಖ–2/2016-17 ದಿನಾಂಕ 20.08.2016.

## ಜ್ಞಾಪನ

ವಿಷಯ: ಖಜಾನೆ–2 ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ (Integrated Financial Management System-IFMS) ಪದವಿ ಪೂರ್ವ ಶಿಕ್ಷಣ ಇಲಾಖೆಯ ಆರ್ಥಿಕ ವಹಿವಾಟುಗಳನ್ನು ನಿರ್ವಹಿಸಲು ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಅಗತ್ಯವಿರುವ ಸಂರಚನೆಯುಳ್ಳ ಗಣಕಯಂತ್ರಗಳನ್ನು ಪೂರೈಸುವ ಬಗ್ಗೆ.

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ: 01.04.2016 ರಿಂದ ರಾಜ್ಯಾದ್ಯಂತ ವಿವಿಧ ಇಲಾಖೆಗಳಲ್ಲಿ ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ ಖಜಾನೆ–2 ಯೋಜನೆಯನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲಾಗುತ್ತಿದ್ದು, ಖಜಾನೆ–2 ವ್ಯವಸ್ಥೆಯಡಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಜಮೆ, ಪಾವತಿ, ಠೇವಣಿ ಖಾತೆಗಳ ನಿರ್ವಹಣೆ, ಲೆಕ್ಕಗಳ ಸಮನ್ವಯ ಮುಂತಾದ ಹಣಕಾಸಿನ ವಹಿವಾಟುಗಳನ್ನು ನಿರ್ವಹಿಸಲು ಸರ್ಕಾರ ಆದೇಶಿಸಿದೆ. ಸರ್ಕಾರದ ನಿರ್ದೇಶನದಂತೆ, ಇಲಾಖೆಯ ಬಟವಾಡೆ ಅಧಿಕಾರಿಗಳು(ಲೆಕ್ಕಾಧಿಕಾರಿಗಳು, ನಿರ್ದೇಶಕರ ಕಚೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು, 31 ಜಿಲ್ಲಾ ಉಪ ನಿರ್ದೇಶಕರು ಮತ್ತು 1204 ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು) ಪ್ರಮುಖ ಆರ್ಥಿಕ ಚಟುವಟಿಕೆಗಳನ್ನು ಖಜಾನೆ–2ರಡಿ ನಿರ್ವಹಿಸಲು ಪೂರ್ವ ತಯಾರಿಗಳು ಆರಂಭಗೊಂಡಿವೆ. ಡಿಡಿಓಗಳು ಕೇಸ್ವಾನ್ ಸಂಪರ್ಕ(KSWAN) ಅಥವಾ ಅಂತರ್ಜಾಲದ ಸಂಪರ್ಕದೊಂದಿಗೆ ಖಜಾನೆ–2ನ್ನು ಪ್ರವೇಶಿಸಬಹುದು.

ಖಜಾನೆ–2ರಲ್ಲಿ ಕಾರ್ಯ ನಿರ್ವಹಿಸಲು ಡಿಡಿಓ ಕಚೇರಿಯ ಡೆಸ್ಕಟಾಪ್/ಲ್ಯಾಪ್‌ಟಾಪ್‌ಗಳಲ್ಲಿ ಈ ಕೆಳಕಂಡದಂತೆ ಸಂರಚನೆ ಮಾಡಬೇಕು.

- ಡೆಸ್ಕಟಾಪ್/ಲ್ಯಾಪ್‌ಟಾಪ್‌ನಲ್ಲಿ ಇತ್ತೀಚಿನ Java-JDK 8ರ ಆವೃತ್ತಿಯನ್ನು ಅನುಸ್ಥಾಪಿಸಿರಬೇಕು(Installed).
- ಡೆಸ್ಕಟಾಪ್/ಲ್ಯಾಪ್‌ಟಾಪ್‌ನಲ್ಲಿ Chrome browser version 40/41/42/43/44 ಹೊಂದಿರಬೇಕು ಅಥವಾ Internet explorer Version 11 ಅನುಸ್ಥಾಪಿಸಿರಬೇಕು.
- ಡೆಸ್ಕಟಾಪ್/ಲ್ಯಾಪ್‌ಟಾಪ್‌ನಲ್ಲಿ ಸೂಕ್ತವಾದ Moser Baer/Aladdin e-Token (DSC) device driver ಅನ್ನು ಅನುಸ್ಥಾಪಿಸಿರಬೇಕು.

- ಡೆಸ್ಕಟಾಪ್/ಲ್ಯಾಪ್‌ಟಾಪ್‌ನಲ್ಲಿ Cogent 3M Bio-Metric device driver ಅನುಸ್ಥಾಪಿಸಿರಬೇಕು.
- ಡೆಸ್ಕಟಾಪ್/ಲ್ಯಾಪ್‌ಟಾಪ್ ಸಂರಚನೆಗಾಗಿ ವಿವರವಾದ ಸಹಾಯಕ ದಾಖಲೆಗಳು ಖಜಾನೆ-2 ಸಿಸ್ಟಂನಲ್ಲಿ ಲಭ್ಯವಿರುತ್ತದೆ.
- ಖಜಾನೆ-2ರ ಮುಖಪುಟದ ಈ ಕೆಳಗಿನ ಲಿಂಕನ್ನು ಲಾಗಿನ್ ಆದಲ್ಲಿ ಸಹಾಯಕ ದಾಖಲಾತಿಯನ್ನು ವೀಕ್ಷಿಸಬಹುದು.
    i. ಬಳಕೆದಾರರ ಐಡಿ ಮತ್ತು ಪಾಸ್ ವರ್ಡ್‌ನೊಂದಿಗೆ http://khajane2.karnataka.gov.in ಲಾಗಿನ್ ಆಗುವುದು.
    ii. ಮೇಲಿನ ಬಲ ಮೂಲೆಯಲ್ಲಿನ option Help ⟶ step to configure Desktop/Laptop ಅನ್ನು ಆಯ್ಕೆಮಾಡುವುದು
    iii. ಕ್ಲಿಕ್ ಗುಂಡಿಯ ಮೇಲೆ ಕ್ಲೀಕ್ ಮಾಡಿದಾಗ ಅವಶ್ಯವಿರುವ ಎಲ್ಲಾ ಸಂರಚನೆಗಳು ಅಪ್‌ಡೇಟ್ ಆಗುತ್ತವೆ.
- ಡೆಸ್ಕಟಾಪ್/ಲ್ಯಾಪ್‌ಟಾಪ್ ಸಂರವನೆ, ಹೆಚ್ಚಿನ ಮಾಹಿತಿಗಾಗಿ ಅಥವಾ ಸಮಸ್ಯೆಗಳಿದಲ್ಲಿ ಡಿಡಿಓರವರು ಸ್ಥಳೀಯ ಖಜಾನಾಧಿಕಾರಿಗಳನ್ನು ಸಂಪರ್ಕಿಸುವುದು ಅಥವಾ 080-22342266; KSWAN IP Phone 110025; ಇ-ಮೇಲ್: k2.helpdesk@karnataka.gov.in ರ ಮೂಲಕ ಖಜಾನೆ-2 ಸಹಾಯವಾಣಿಯನ್ನು ಸಂಪರ್ಕಿಸುವುದು.

ಈ ಹಿನ್ನೆಲೆಯಲ್ಲಿ ತಮ್ಮ ಕಚೇರಿ ಮತ್ತು ತಮ್ಮ ಜಿಲ್ಲಾ ವ್ಯಾಪ್ತಿಗೆ ಬರುವ ಎಲ್ಲಾ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿನ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ ಖಜಾನೆ-2 ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಆರ್ಥಿಕ ವಹಿವಾಟುಗಳನ್ನು ನಿರ್ವಹಿಸಲು ಅಗತ್ಯವಿರುವ ಸಂರಚನೆಯುಳ್ಳ ಗಣಕಯಂತ್ರಗಳ ಲಭ್ಯತೆ ಬಗ್ಗೆ ಈ ಪತ್ರದೊಂದಿಗೆ ಲಗತ್ತಿಸಿರುವ ಅನುಬಂಧ-1ರಲ್ಲಿ ಕ್ರೋಢೀಕರಿಸಿ ಈ ಪತ್ರ ತಲುಪಿದ ಒಂದು ವಾರದೊಳಗೆ ಕೇಂದ್ರ ಕಚೇರಿಗೆ ಅಂಚೆ ಮೂಲಕ ಹಾಗೂ ಇ-ಮೇಲ್ pueegovernance@gmail.com ಗೆ ಅನುಬಂಧದಲ್ಲಿ ವಿವರಗಳನ್ನು ಸಲ್ಲಿಸಲು ಸೂಚಿಸಿದೆ. ತಪ್ಪಿದಲ್ಲಿ ಮುಂದಿನ ಆಗುಹೋಗುಗಳಿಗೆ ತಾವೇ ಜವಾಬ್ದಾರಾಗುತ್ತಿರಿ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿ,
1. ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ಲೆಕ್ಕಾಧಿಕಾರಿಗಳು, ಪದವಿ ಪೂರ್ವ ಶಿಕ್ಷಣ ಇಲಾಖೆ. ಬೆಂಗಳೂರು
3. ಕಛೇರಿ ಪ್ರತಿ.

## ಅನುಬಂಧ-1

### ಖಜಾನೆ-2 ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾ ಖೆಯ ಆರ್ಥಿಕ ವಹಿವಾಟುಗಳನ್ನು ನಿರ್ವಹಿಸಲು ಅಗತ್ಯವಿರುವ ಸಂರಚನೆಯುಳ್ಳ ಗಣಕಯಂತ್ರಗಳ ಲಭ್ಯತೆಯ ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲಾ ಉಪ ನಿರ್ದೇಶಕರು ಕಚೇರಿ/ಕಾಲೇಜಿನ ಹೆಸರು | ಗಣಕಯಂತ್ರಗಳ ಲಭ್ಯತೆ ಮತ್ತು ಅದರ ಸಂರಚನಾ (Configuration in details) | ಪ್ರಿಂಟರ್ ಲಭ್ಯತೆ ಮತ್ತು ಅದರ ಸಂರಚನಾ | ಕೇಸ್ವಾನ್ ಸಂಪರ್ಕ(KSWAN) ಅಥವಾ ಅಂತರ್ಜಾಲದ ಸಂಪರ್ಕ ಹೊಂದಿದಿಯೇ? | ಸಂಖ್ಯೆ:3,4,5 ಹೊಂದಿದ್ದಲ್ಲಿ ಖಜಾನೆ -2 ಅನುಸ್ಥಾಪಿಸಬಹುದೇ ? | ಸಂಖ್ಯೆ:3,4,5 ಹೊಂದಿರದೆ ಇದ್ದಲ್ಲಿ ಖರೀದಿಸಲು ಅಂದಾಜು ವೆಚ್ಚ | ಷರಾ |
|---|---|---|---|---|---|---|---|
| 1 | 2 | 3 | 4 | 5 | | | |
| | | | | | | | |
| | | | | | | | |
| | | | | | | | |
| | | | | | | | |
| | | | | | | | |
| ಒಟ್ಟು | | | | | | | |

- ಗಣಕಯಂತ್ರ/ಪ್ರಿಂಟರ್‌ಗಳು ಖಜಾನೆ-2 ಅನುಕಲನ ಹಣಕಾಸು ನಿರ್ವಹಣೆ ವ್ಯವಸ್ಥೆಗೆ ಜಿಲ್ಲಾ ಉ.ನಿ ಕಛೇರಿಗಳಿಗೆ ಅಥವಾ ಕಾಲೇಜುಗಳಿಗೆ ಅವಶ್ಯಕತೆ ಇದಲ್ಲಿ ಜಿಲ್ಲಾ ಉಪನಿರ್ದೇಶಕರು ಸ್ಪಷ್ಟ ವಿವರ ನೀಡಬೇಕಾಗಿದೆ.

ಜಿಲ್ಲಾ ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.